ಮರೆಯುತ್ತಿದ್ದ ಜಯಶ್ರೀ ಕಾಕು ಇಂದು ಹಠಾತ್ತನೆ 'ಇಲ್ಲ'ವೆಂದರೆ ನಂಬಲಾಗುತ್ತಿಲ್ಲ. ಅದೂ ನಾಳೆ ಅಜಯ ಸಂಸಾರ ಸಮೇತ ಬರುತ್ತಾನೆಂದರೆ ಇಂದೇ ಹೀಗಾಗಬೇಕೇ? ಎಲ್ಲ ಅಸಂಗತ... ಅಯೋಮಯವಾದರೂ ವಾಸ್ತವವಾಗಿತ್ತು. ಕಾಲಚಕ್ರ ತಿರುಗುತ್ತ ದಾಂಗುಡಿಯಿಟ್ಟ ನೆನಪುಗಳು ಹಸಿರಾಗುತ್ತಿರುವಾಗಲೇ ನನ್ನ ಕಾರು ಸರ್ಜಾಪುರದ ಕಾಕಾನ ಅಪಾರ್ಟ್‌ಮೆಂಟ್ ತಲುಪಿತ್ತು.

ಮನೆಯೊಳಗೆ ಆಗಲೇ ನೆರೆಕೆರೆಯ ಜನ ನೆರೆದಿದ್ದರು. "ಏನಾಯ್ತಂತೆ... ಹೇಗಾಯ್ತಂತೆ?..."ಗಳು ಕೇಳಿಬರುತ್ತಿದ್ದವು. ನನ್ನನ್ನು ನೋಡಿದ್ದೇ ಓಡಿ ಬಂದ ಕಾಕಾ ತಬ್ಬಿಕೊಂಡು "ಗೋಪಿ" ಎಂದು ಅಳಲಾರಂಭಿಸಿದರು. ನನ್ನ ಕಣ್ಣುಗಳಲ್ಲೂ ನೀರು ಹರಿಯಿತು. "ಅದೇನಾತಂದ್ರ... ಅಜಯ ಸಂಸಾರ ಸಮೇತ ತಿರುಗಿ ಬರ್ಲಿ ಅಂತ ಇಕಿ ಹರಕಿ ಹೊತ್ಗೊಂಡಿದ್ಲಂತ. ಅಂವ ನಾಳೆ ಬರ್ತಾನಂದ್ರ 'ಇವತ್ತ ನಂದಿ ಹಿಲ್ಸ್‌ಗೆ ಹೋಗಿಬರೋಣ ನಡ್ರಿ. ಅಂವ ಬಂದ ಮ್ಯಾಲೆ ಎಲ್ಲಾರೂ ಇನ್ನೊಮ್ಮೆ ಹೋದ್ರಾತು' ಅಂದ್ಲು. 'ಹ್ಞೂಂ' ಅಂತ ಹೋದ್ವಿ. ಅಲ್ಲೆ ಗುಡಿಗೆ ಹೋದ್ವಿ. ಮಧ್ಯಾಹ್ನ ಕಟಗೊಂಡು ಹೋದದ್ದು ಊಟಾ ಮಾಡಿದ್ವಿ. ಸುತ್ತೆಲ್ಲಾ ಓಡ್ಯಾಡಿ ಅಜಯನ ಭವಿಷ್ಯದ ಬಗ್ಗೆ ಮಾತಾಡ್ಗೋತ ಕೂತ್ವಿ. ಛಾ ಕುಡಿಯೋಣು ಅಂದ್ಲಂತ ನಾ ಛಾ ತರ್ಲಿಕ್ಕೆ ಹೋದೆ. ಅಷ್ಟರಾಗ ಸಾವಕಾಶ ಟಿಪ್ಪು ಡ್ರಾಪ್ ಕಡೆ ಹೋಗ್ಯಾಳ. ನಾ ಬರ್ತಿದ್ದಂಗ ಕಾಲು ಜಾರಿದ್ಲು ನೋಡು... ಅವು ಸುಡಗಾಡು ಹೈ ಹೀಲ್ಸ್ ಚಪ್ಪಲಿ... ಜಾರಿಬಿಡ್ತು. ಜೋರಲೇ ಚೀರಿದ್ಲು. ನಾ ಕೈಯಾಗಿನ ಛಾ ವಗದು ಓಡಿದೆ. ಸುತ್ತ ಮುತ್ತ ಇದ್ದಾವರೂ ಹಿಡೀಲಿಕ್ಕೆ ಪ್ರಯತ್ನಾ ಮಾಡಿದ್ರು. ಆದ್ರ ಆಗ ಧಡ್ ಅಂತ ಸಪ್ಪಳಾಗಿ ಕೆಳಗ ಬಿದ್ದ ಬಿಟ್ಟಿದ್ಲು. ಮಂದೆಲ್ಲಾ 'ಅಲ್ಲೆ ನೋಡ್ರಿ... ಇಲ್ಲೆ ನೋಡ್ರಿ' ಅನಕೋತ ಓಡ್ಯಾಡಿದ್ರೂ ಸಿಗಲೇ ಇಲ್ಲ. ನಮ್ಮ ಕೈಬಿಟ್ಟು ಹೋಗೇಬಿಟ್ಲು. ಆಮ್ಯಾಲೆ ಪೊಲೀಸ್ ಕಂಪ್ಲೇಂಟ್ ಕೊಟ್ವಿ. ಅವರ ಹಿಂದ ಅಡ್ಯಾಡಿ ಹೇಳೋದಾತು. ಹುಡಕ್ಯಾಡಿ ಅವರು 'ಕೆಳಗ ಬಾಡಿ ಸಿಕ್ತು' ಅಂದ್ರು. ಪೋಸ್ಟ್ ಮಾರ್ಟಮ್ ಮಾಡಿ ನಾಳೆ ಕೊಡ್ತೇವಿ' ಅಂದ್ರು. ಅಜಯಗೇನೂ ಗೊತ್ತಿಲ್ಲ. ಪಾಪ... ಎಷ್ಟು ಶಾಕ್ ಆಗ್ತದೋ..." ಎಂದು ಅತ್ತರು. ಬೆಳಗಿನವರೆಗೂ ಬಿಕ್ಕುತ್ತಲೇ ಇದ್ದರು. ನಾನು ಅವರ ಕೈಹಿಡಿದು ಸಾಂತ್ವನಿಸುತ್ತಿದ್ದೆ.

ಅವರ ಕೈಹಿಡಿದು ಕುಳಿತ ನನ್ನ ಮನದಲ್ಲಿ ಕೋಲಾಹಲ. ಮಗ, ಸೊಸೆ ತಿರುಗಿ ಬರುತ್ತಾರೆಂದು ಅದೆಷ್ಟು ಸಂಭ್ರಮಪಟ್ಟಿದ್ದರು ಕಾಕು. "ಅಮೆರಿಕಾಕ್ಕ ಹೋದಾವ್ರು ತಿರುಗಿ ಬರೋದ ಕಡಿಮಿ ಅಂತಾರ. ನನ್ನ ಮಗ ತಿರಗಿ ಬರ್ಲಿಕ್ಕತ್ತಾನ. ಇಲ್ಲೇ ಬಿಸಿನೆಸ್ ಮಾಡ್ತಾನಂತ" ಎಂದು ಎಲ್ಲೆಡೆ ಡಂಗೂರ ಸಾರಿದ್ದರು. "ನನ್ನ ಸೊಸಿ ಅನಿಕಾ ಭಾಳ ಛೊಲೊ ಹುಡುಗಿ. ನಾವು ತಾಯಿ ಮಕ್ಕಳ ಗತೇನ ಇದ್ದೇವಿ" ಎಂದು ಅನೇಕ ಬಾರಿ ಹೇಳಿದ್ದರು. ಆರಿಸಿ ನೂರು ಜನರಲ್ಲಿ ಎದ್ದು ಕಾಣುವ ಸುಂದರ ಸೊಸೆಯನ್ನೇ ಮನೆ ತುಂಬಿಸಿಕೊಂಡಿದ್ದರು. ಧಾಂ... ಧೂಂ... ಎಂದು ಅತ್ಯಂತ ಸಡಗರದಿಂದ ಮದುವೆಯಾಗಿತ್ತು. ಜೊತೆಗೆ ತವರಿನವರು ಮಗಳಿಗೆ ಕೇಳದೇ ಇಟ್ಟುಕೊಟ್ಟ ಇಪ್ಪತ್ತು ತೊಲ ಚಿನ್ನ. ಕಾಕು ಬೀಗಿದ್ದೇ ಬಂತು. ನನ್ನ ಮದುವೆ ರಾಣೆಬೆನ್ನೂರಿನ ಒಂದು ಛತ್ರದಲ್ಲಿ ಸಾಧಾರಣವಾಗಿ ನಡೆದಿತ್ತು. ಮುಸಿಮುಸಿ ನಗುತ್ತ ಮಂಟಪದಲ್ಲೇ ನನ್ನ ಕೈ ಹಿಡಿದೆಳೆದ ಕಾಕು, "ಯಾಕೋ ಪಾಂಡ್ಯಾ? ಛೋಲೊ ಮಾಡರ್ನ್, ಕಲತದ್ದ, ಛಂದ ಹುಡಗಿನ್ನ ಆರಸಬೇಕಿತ್ತಿಲ್ಲೋ... ಹಳ್ಳಿಗುಗ್ಗನ್ನ ಆರಸೀದಿ" ಎಂದು ವ್ಯಂಗ್ಯದ ಬಾಣ ಹೊಡೆದೇಬಿಟ್ಟರು. "ನಾವೆಲ್ಲ ಹಳ್ಳಿ ಮಂದಿ ಕಾಕು. ನಮಗ ಹಳ್ಳಿಗುಗ್ಗನ ಸಾಕು" ಎಂದಿದ್ದೆ. ಎಣ್ಣೆಗೆಂಪು ಬಣ್ಣದ